◆ **ಮಣಿಪುರಿ ನೃತ್ಯ ಪ್ರಕಾರದ ವರ್ಚಸ್ಸನ್ನೇ ಬದಲಾಯಿಸಿದ ಸಹೋದರಿಯರ ಕುಟುಂಬ ನಿಮ್ಮದು. ಈ ಕುಟುಂಬದ ಕಿರಿಯ ಸದಸ್ಯೆಯಾದ ನಿಮ್ಮ ಆಸಕ್ತಿ ಮಣಿಪುರಿ ನೃತ್ಯದತ್ತ ಹೊರಳಿದ್ದು ಹೇಗೆ?**

ನನ್ನ ತಂದೆ ನವನೀತ್‌ಲಾಲ್ ಜವೇರಿ ಅವರು ಉದ್ಯಮಿಯಾಗಿದ್ದರೂ ಸಾಹಿತ್ಯ ಮತ್ತು ಕಲಾಕ್ಷೇತ್ರದತ್ತ ಅಪಾರ ಒಲವುಳ್ಳವರಾಗಿದ್ದರು. ಗುಜರಾತಿ ಕುಟುಂಬ ನಮ್ಮದು. ಮುಂಬೈಯಲ್ಲಿ ಉದ್ಯಮದ ಸಲುವಾಗಿ ನೆಲೆನಿಂತಿದ್ದೆವು. ನನ್ನ ಅಕ್ಕಂದಿರಾದ ನಯನಾ, ರಂಜನಾ ಮತ್ತು ಸುವರ್ಣಾ ಶಾಲೆಗೆ ಹೋಗುತ್ತಿದ್ದಾಗ ಅಲ್ಲಿ ಭರತನಾಟ್ಯ, ಕಥಕ್ ಮುಂತಾದ ನೃತ್ಯಗಳನ್ನು ಕಲಿಯುತ್ತಿದ್ದರು. ನಾನೂ ಅವರೊಂದಿಗೆ ಹೆಜ್ಜೆ ಹಾಕುವವಳೇ ಆಗಿದ್ದೆ. ನಾವು ನೃತ್ಯ ಕ್ಷೇತ್ರಕ್ಕೆ ಬರಲು ಇವಿಷ್ಟೇ ಕಾರಣವಲ್ಲ. ಅಂದಿನ ಸಾಮಾಜಿಕ ಸ್ಥಿತಿಯೂ ಕಾರಣ. ಅದು 1940ರ ಆಸುಪಾಸಿನ ಸಮಯ. ಇಡೀ ದೇಶದಲ್ಲಿ ರಾಷ್ಟ್ರೀಯತೆಯ ಒಲವು ಗಾಢವಾಗಿತ್ತು. ಬ್ರಿಟಿಷರ ಆಡಳಿತದಿಂದ ಮುಕ್ತವಾಗಿ ದೇಶವನ್ನು ಕಟ್ಟುವ ಉತ್ಸಾಹ ನಮ್ಮ ಧಮನಿಗಳಲ್ಲಿ ಹರಿಯುತ್ತಿತ್ತು. ಮಹಾತ್ಮಾ ಗಾಂಧೀಜಿಯವರ ಪ್ರಭಾವವು ದೇಶದ ಜನರ ಮೇಲೆ ಗಾಢವಾಗಿತ್ತು. ರಾಷ್ಟ್ರೀಯತೆಯನ್ನು ಹುರಿದುಂಬಿಸುವ ಅವರ ಮಾತುಗಳನ್ನು ಇಷ್ಟಪಡದವರು ಯಾರು? ನಮ್ಮ ದೇಶದ ಇತಿಹಾಸ, ಕಲೆ, ಸಾಹಿತ್ಯ ಮುಂತಾದವುಗಳನ್ನು ಕಾಪಾಡಿಕೊಳ್ಳಬೇಕು ಎಂಬ ಧೋರಣೆ ಕಲೆ ಮತ್ತು ಸಾಹಿತ್ಯಕ್ಷೇತ್ರದಲ್ಲಿದ್ದವರಲ್ಲಷ್ಟೇ ಅಲ್ಲ, ಉದ್ಯಮಿಗಳು, ಧನಿಕರ ಮನಸ್ಸಿನಲ್ಲೂ ಬೇರೂರಿತ್ತು. ಈ ಧೋರಣೆಗೆ ರೂಪು ನೀಡಲೋ ಎಂಬಂತೆ ರವೀಂದ್ರನಾಥ ಟ್ಯಾಗೋರರು ದೇಶದ ಕಲಾಪ್ರಕಾರಗಳೆಲ್ಲ ಮರುಜೀವ ಪಡೆಯಬೇಕು ಎಂದು ಆಶಿಸಿದ್ದರು. ಅದಕ್ಕೆ ಪೂರಕವಾಗಿ ಅವರು ಶ್ರಮಿಸಿದರು ಕೂಡ. ಶಾಂತಿನಿಕೇತನದಲ್ಲಿ ವಿವಿಧ ಕಲಾಪ್ರಕಾರಗಳ ಅಭ್ಯಾಸ, ತರಬೇತಿ, ಅಧ್ಯಯನಗಳಿಗೆ ಆಶ್ರಯ ನೀಡಿ, ಮಾರ್ಗದರ್ಶನವನ್ನೂ ಮಾಡಿದ್ದರು. ಇದೇ ಸಂದರ್ಭದಲ್ಲಿ, ಅಂದರೆ 1943ರ ಸುಮಾರಿಗೆ ಮುಂಬೈನ ಭಾರತೀಯ ವಿದ್ಯಾಭವನದಲ್ಲಿ ಒಂದು ನೃತ್ಯನಾಟಕವನ್ನು ನಿರ್ದೇಶಿಸಲು ಮಣಿಪುರಿ ನೃತ್ಯಗುರುಗಳಾದ ಬಿಪಿನ್ ಸಿಂಗ್ ಅವರು ಬಂದಿದ್ದರು. ಮಣಿಪುರಿ ಕುಟುಂಬದವರಾದರೂ ಅವರ ಅಜ್ಜ ಅಸ್ಸಾಂನ ಕಾಚಾರ್ ಎಂಬಲ್ಲಿಗೆ ಹೋಗಿ ನೆಲೆಸಿದ್ದರು. ತಮ್ಮೂರಿನ ಕಲಾಶ್ರೀಮಂತಿಕೆಯ ಬಗ್ಗೆ ಅಪಾರ ಅಭಿಮಾನವಿದ್ದ ಬಿಪಿನ್ ಸಿಂಗ್ ಅವರು ಔಪಚಾರಿಕ ಶಿಕ್ಷಣವನ್ನು ಪಡೆದಿದ್ದು ಕಡಿಮೆ. ಆದರೆ, ಅವರ ಓದು ಸಮುದ್ರದಂತೆ ವಿಸ್ತಾರವಾದುದು. ಆ ನೃತ್ಯನಾಟಕದಲ್ಲಿ ನನ್ನ ಅಕ್ಕಂದಿರು ಭಾಗವಹಿಸಿದ್ದರು ಮತ್ತು ಅದರಲ್ಲಿ ಮಣಿಪುರಿ ನೃತ್ಯಭಾಗವನ್ನು ಗುರುಗಳು ನಿರ್ದೇಶಿಸಿದ್ದರು. ಹೀಗೆ ಬಿಪಿನ್ ಸಿಂಗ್ ಅವರು ನಮ್ಮ ಕುಟುಂಬದ ಸಂಪರ್ಕಕ್ಕೆ ಬಂದರು. ಅಕ್ಕಂದಿರಿಗೆ ಮಣಿಪುರಿ ನೃತ್ಯವು ಇಷ್ಟವಾಗಿ, ಗುರುಗಳು ಮನೆಗೇ ಬಂದು ನೃತ್ಯವನ್ನು ಹೇಳಿಕೊಡುವುದು ಎಂದಾಯಿತು. ಅಕ್ಕಂದಿರ ಹಾದಿಯಲ್ಲಿ ನಾನೂ ಸಾಗಿದೆ. ನಾವು ನಾಲ್ವರು ಸೋದರಿಯರು ಮಣಿಪುರಿ ನೃತ್ಯಪ್ರಕಾರ ವರ್ಚಸ್ಸನ್ನೇ ಬದಲಾಯಿಸಬಲ್ಲೆವು ಎಂದು ಗುರುಗಳು ಭಾವಿಸಿದ್ದರೋ ತಿಳಿಯದು. ಆದರೆ, ಅವರು ತಮ್ಮ ದೂರದೃಷ್ಟಿಯಿಂದ ನಮ್ಮನ್ನು ಅಧ್ಯಯನದ ಹಾದಿಗೆ ಹಚ್ಚಿದರು. ಸಂಶೋಧನೆ ಎಂದರೆ ಏನೆಂದು ತಿಳಿಸಿಕೊಟ್ಟರು. ಅವರು ಹೇಳಿದ ಕೆಲಸಗಳನ್ನೆಲ್ಲ ಮಾಡುತ್ತಾ ನಾವು ಮುಂದಡಿ ಇಡುತ್ತಿದ್ದೆವು. ಬಹಳ ದೂರ ಸಾಗಿದ ಬಳಿಕವಷ್ಟೇ ನಮಗೆ ಗೊತ್ತಾಗಿದ್ದು, 'ನಾವೇನು ಮಾಡುತ್ತಿದ್ದೇವೆ, ಈ ಕ್ಷೇತ್ರದಲ್ಲಿನ ಬದಲಾವಣೆಗೆ ಹೇಗೆ ಕಾರಣರಾಗಿದ್ದೇವೆ' ಎನ್ನುವುದು.

◆ **ಆ ಬದಲಾವಣೆಯ ಸ್ವರೂಪವನ್ನು ವಿವರಿಸಬಹುದಾ?**

ಮಣಿಪುರದ ವೈಷ್ಣವ ದೇವಸ್ಥಾನಗಳ ಆವರಣದಲ್ಲಿ ದೇವರಿಗೆ ಭಕ್ತಿಯಿಂದ ಸಲ್ಲಿಸುವ ಸೇವೆಯೇ ಈ ಮಣಿಪುರಿ ನೃತ್ಯ. ರಾಸಲೀಲೆ, ಸಂಕೀರ್ತನೆಗಳು ಅಲ್ಲಿ ಸಾಮಾನ್ಯ. ಈ ಪ್ರದರ್ಶನಗಳು ಸಂಜೆ ಆರಂಭವಾಗಿ ರಾತ್ರಿಯಿಡೀ ನಡೆಯುವುದುಂಟು. ಈಗಲೂ ಅದೇ ಮಾದರಿಯಲ್ಲಿ ಸೇವಾರೂಪದಲ್ಲಿ ಮಣಿಪುರಿ ನೃತ್ಯ ಅಲ್ಲಿನ ದೇವಸ್ಥಾನಗಳಲ್ಲಿ ನಡೆಯುತ್ತಿದೆ. 1949ರಲ್ಲಿ ಗುರುಗಳು ಅಕ್ಕಂದಿರಿಬ್ಬರನ್ನು ಮಣಿಪುರಕ್ಕೆ ಕರೆದುಕೊಂಡು ಹೋಗಿ ಅಲ್ಲಿನ ದೇವಸ್ಥಾನಗಳಲ್ಲಿ ನಡೆಯುತ್ತಿದ್ದ ಕಾರ್ಯಕ್ರಮಗಳನ್ನು ತೋರಿಸಿದರು. 1956ರಲ್ಲಿ ನಾವು ನಾಲ್ವರೂ ಅಲ್ಲಿಗೆ ಹೋಗಿ,